**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ**

**ಹೊಳಲ್ಕೆರೆ.**

**ಸಿ.ಸಿ.113/2016**

| | | | |
|---|---|---|---|
| ಸಾಕ್ಷಿಯ ಹೆಸರು | : | ದಯಾನಂದ | ಪ್ರಾ.ಸಾಃ4 |
| ತಂದೆಯ ಹೆಸರು | : | ಲೇಟ್ ರಂಗಪ್ಪ | ಚಾಸಾಃ6 |
| ವಯಸ್ಸು | : | 75 ವರ್ಷ | |
| ಕೆಲಸ | : | ನಿವೃತ್ತ ಶಿಕ್ಷಕ | ಸಾ ಪ್ರ ಬೋ |
| ವಾಸ | : | ಮಲ್ಲಾಡಿಹಳ್ಳಿ ಗ್ರಾಮ | ದಿಃ06.02.2026 |

**ಮುಖ್ಯ ವಿಚಾರಣೆ : ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರ ಅಡಿಯಲ್ಲಿ ಸಾಕ್ಷ್ಯ:**

1. ಚಾಸಾ-1,4 ಮತ್ತು 5 ರವರು ಗೊತ್ತು. ಚಾಸಾ-4 ನನ್ನ ಸ್ನೇಹಿತರು. ಚಾಸಾ-8 ನನ್ನ ಸ್ನೇಹಿತರು. ಚಾಸಾ-8 ರವರು ಮೃತಪಟ್ಟಿರುತ್ತಾರೆ. ಚಾಸಾ-2 ರವರು ನನ್ನ ಸ್ನೇಹಿತರು, ಚಾಸಾ-2 ರವರು ಮೃತಪಟ್ಟಿರುತ್ತಾರೆ.

2. ಚಾಸಾ-1 ಮತ್ತು 1 ನೇ ಆರೋಪಿ ವಿವಾಹ ದಿನಾಂಕ 17.02.2010 ರಂದು ಮಲ್ಲಾಡಿಹಳ್ಳಿ ಬನಶಂಕರಿ ಕಲ್ಯಾಣ ಮಂಟಪದಲ್ಲಿ ನೇರವೇರಿರುತ್ತದೆ. ವಿವಾಹದ ನಂತರ ಚಾಸಾ-1 ಮತ್ತು 1 ನೇ ಆರೋಪಿ ಭದ್ರಾವತಿಯ ಅವರ ಮನೆಯಲ್ಲಿ ವಾಸವಾಗಿದ್ದರು. ಸದರಿ ಸಮಯದಲ್ಲಿ ಚಾಸಾ-1 ಮತ್ತು 1 ನೇ ಆರೋಪಿ ಅವರ ಮನೆಯವರ ನಡುವೆ ವೈಮನಸ್ಸು ಇತ್ತು. ಒಂದೂವರೆ ವರ್ಷದ ನಂತರ ಚಾಸಾ-1 ರವರು ಚಾಸಾ-4 ರವರ ಮನೆಗೆ ಬಂದು ಅವರ ಜೊತೆಯಲ್ಲಿಯೇ ಇದ್ದಾರೆ. ಈ ಕುರಿತು ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**<u>ಪಾಟೀ ಸವಾಲು ಎ.ಪಿ.ಪಿ.ಯವರಿಂದ:</u>**

3. ದಿನಾಂಕ 17.02.2010 ರಂದು ಚಾಸಾ-1 ಮತ್ತು 1 ನೇ ಆರೋಪಿತನ ವಿವಾಹದ ನಂತರದ 2 ವರ್ಷಗಳ ಬಳಿಕ ಚಾಸಾ-1 ರವರಿಗೆ ಮಕ್ಕಳಾಗಿಲ್ಲ ಎಂಬ ವಿಚಾರವಾಗಿ 1 ನೇ ಆರೋಪಿ ಚಾಸಾ-1 ರವರಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆಯನ್ನು ನೀಡುತ್ತಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಚಾಸಾ-1 ರವರು ಸದರಿ ಹಿಂಸೆಯನ್ನು ಸಹಿಸಿಕೊಂಡು ಹೋಗುತ್ತಿದ್ದು, ಪದೇ ಪದೇ ಕಿರುಕುಳ ನೀಡುತ್ತಿದ್ದ ಕಾರಣ 1 ನೇ ಆರೋಪಿತನ ಕಿರುಕುಳವನ್ನು ಸಹಿಸದೇ ಚಾಸಾ-1 ರವರು ನಮ್ಮ ಮನೆಗೆ ಬಂದರು ಎಂದರೆ ಸರಿಯಲ್ಲ. ದಿನಾಂಕ 24.08.2013 ರಂದು ರಾತ್ರಿ 08.00 ಗಂಟೆ ಸಮಯದಲ್ಲಿ ಚಾಸಾ-1 ರವರು ನಮ್ಮ ಮನೆಯಲ್ಲಿ ಇದ್ದಾಗ, 1 ನೇ ಆರೋಪಿ ನಮ್ಮ ಮನೆಯ ಬಳಿ ಬಂದು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಕೈ ಮತ್ತು ಕಾಲುಗಳಿಂದ ಹೊಡೆದು, ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ನಾನು ದಿನಾಂಕ 25.08.2013 ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.